QUESTIONS FOR ANSWERS ON THE DAY
(but not taken up)

ಯಲಬುರ್ಗ ತಾಲೂಕಿನಲ್ಲಿ ಮಂಜೂರ್ಮಾಡಿದ ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು ಯೋಜನೆಗಳು

876. ಶ್ರೀ ಪ್ರಭುರಾಜ್ ಪಾಟೀಲ್ (ಯಲಬುರ್ಗ).—ಲೋಕೋಪಯೋಗಿ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಯಚೂರ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನಲ್ಲಿ ಎನ್. ಆರ್. ಡಬ್ಲ್ಯೂ. ಎಸ್. ಸ್ಕೀಮಿನ ಕಳಗೆ ಕುಡಿಯುವ ನೀರನ್ನು ಪೂರೈಸಲು ಕಳೆದ ಮೂರು ವರ್ಷದಿಂದ ಇಲ್ಲಿಯವರೆಗೆ ಮಂಜೂರಾದ ಹಾಗೂ ಸರ್ವೇ ಆದ ಯೋಜನೆಗಳೆಷ್ಟು ;

(ಆ) ಇವುಗಳಲ್ಲಿ ಎಷ್ಟು ಯೋಜನೆಗಳನ್ನು ಪೂರ್ತಿಗೊಳಿಸಲಾಗಿದೆ ;

(ಇ) ಉಳಿದ ಯೋಜನೆಗಳು ಯಾವ ಯಾವ ಹಂತದಲ್ಲಿವೆ ;

(ಈ) ಅವುಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ?

ಶ್ರೀ ಎಚ್ ಎಂ. ಚನ್ನಬಸಪ್ಪ (ಲೋಕೋಪಯೋಗಿ ಮಂತ್ರಿಗಳು).—(ಅ) (i) ಮಂಜೂರಾದ ಯೋಜನೆಗಳು-6

(ii) ಸರ್ವೇ ಆದ ಯೋಜನೆಗಳು–2

(ಆ) ಯಾವುದೂ ಇಲ್ಲ.

(ಇ) ಒಟ್ಟು ಮಂಜೂರಾದ 6 ನೀರು ಪೂರೈಕೆ ಯೋಜನೆಗಳ ಪೈಕಿ 3 ಯೋಜನೆಗಳ ಕೆಲಸವನ್ನು ಸಂಭಂಧಪಟ್ಟ ಗ್ರಾಮಗಳಲ್ಲಿ ವಿದ್ಯುತ್ ಸೌಲಭ್ಯವಿಲ್ಲದ ಕಾರಣ ಇನ್ನೂ ಪ್ರಾರಂಭಿಸಿಲ್ಲ, 2 ಯೋಜನೆಗಳನ್ನು ಸಂಭಂಧಿಸಿದ ಗ್ರಾಮಗಳಲ್ಲಿ ಇನ್ನೂ ನೀರಿನ ಮೂಲ ಸರಿಯಾಗಿ ಸಿಕ್ಕಲ್ಲವಾದ್ದರಿಂದ ಕಾಮಗಾರಿಯನ್ನು ತೆಗೆಕೊಂಡಿಲ್ಲ ಮತ್ತು ಇನ್ನುಳಿದ ಒಂದು ಯೋಜನೆಯು ಪ್ರಗತಿಯಲ್ಲದೆ. ಈ ಯೋಜನೆಗೆ ಸಂಭಂಧಿಸಿದಂತೆ ಪಂಪು ಕೊಠಡಿಯು ನಿರ್ಮಾಣದಲ್ಲಿದೆ ಮತ್ತು ರೈಸಿಂಗ್ ಮೈನ್ ಕೆಲಸವು ಪ್ರಗತಿಯಲ್ಲಿದೆ.

(ಈ) ಹಾಲಿ ಪ್ರಗತಿಯಲಿರುವ ಒಂದು ನೀರು ಪೂರೈಕೆ ಯೋಜನೆಯನ್ನು ಡಿಸೆಂಬರ್ 1976 ಅಂತ್ಯದೊಳಗೆ ಪೂರೈಸಲು ಯೋಚಿಸಲಾಗಿದೆ, 3 ನೀರಿನ ಯೋಜನೆಗಳ ನೀರಿನ ಮೂಲ ಸರಿಯಾಗಿ ಕಂಡು ಹಿಡಿದ ನಂತರ ಅವುಗಳನ್ನು ಪೂರೈಸಲಾಗುವುದು. ಮತ್ತು ಇನ್ನುಳಿದ ಮೂರು ಯೋಜನೆಗಳ ಕಾಮಗಾರಿಯನ್ನು ಸಂಭಂಧಿಸಿದ ಗ್ರಾಮಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಿದ ನಂತರ ತೆಗೆದು ಕೊಂಡು ಪೂರೈಸಲಾಗುವುದು.

ಮಲಪ್ರಭಾ ನೀರಾವರಿ ಯೋಜನೆಯಿಂದ ಯಲಬುರ್ಗಕ್ಕೆ ನೀರು ಸರಬರಾಜು ಮಾಡುವುದು

877. ಶ್ರೀ ಪ್ರಭುರಾಜ್ ಪಾಟೀಲ್ (ಯಲಬುರ್ಗ).— ಭಾರಿ ಹಾಗೂ ಮಧ್ಯಮದ ನೀರಾವರಿ ರಾಜ್ಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ :—

(ಅ) ರಾಯಚೂರು ಜಿಲ್ಲೆಯ, ಯಲಬುರ್ಗ ತಾಲ್ಲೂಕಿಗೆ ಮಲಪ್ರಭಾ ನೀರಾವರಿ ಯೋಜನೆಯಿಂದ, ನೀರು ಪೂರೈಸಲು ಸರಕಾರ ಯೋಚಿಸಿದೆಯೇ ;

(ಆ) ಆ ಬಗ್ಗೆ ಸರ್ವೆ ಕಾರ್ಯ ಏನಾದರೂ ನಡೆದಿದೆಯೆ ;

(ಇ) ಹಾಗಿದ್ದರೆ ಅದರ ವಿವರಗಳೇನು ?